**ಬಸವಕಲ್ಯಾಣ ಪಟ್ಟಣಕ್ಕೆ ರಸ್ತೆಗಳ ಡಾಂಬರೀಕರಣ.**

3227 - ಶ್ರೀ ಬಸವರಾಜ ಪಾಟೀಲ ಅಟ್ಟೂರ್, (ಬಸವಕಲ್ಯಾಣ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಬಸವಕಲ್ಯಾಣ ಪಟ್ಟಣದಲ್ಲಿ ಯಾತ್ರಾಸ್ಥಳಗಳ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ಸಂಖ್ಯೆ ಎಷ್ಟು? ಮತ್ತು ಅವುಗಳ ಹೆಸರುಗಳೇನು?*

*ಆ) ಸದರಿ ರಸ್ತೆಗಳು ಬಹಳ ದುಸ್ಥಿತಿಯಲ್ಲಿದ್ದು ಜನರು ಓಡಾಡಲು ತುಂಬಾ ತೊಂದರೆ ಹಾಗೂ ವಾಹನಗಳಿಗೆ ಅಡಚಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಇ) ಅಕ್ಕನಾಗಮ್ಮನ ಗವಿ ಆರವಿನ ಮನೆ ಮೇಳದ ಮಾರಯ್ಯನ ಹೊಂಡ ಅನುಭವ ಮಂಟಪ, ಮಾಚಿದೇವರ ಹೊಂಡದ ರಸ್ತೆಗಳಿಗೆ ತಕ್ಷಣ ಹಣ ಬಿಡುಗಡೆ ಮಾಡಿ ರಸ್ತೆ ಡಾಂಬರೀಕರಣ ಮಾಡುವ ಬಗ್ಗೆ ಸರ್ಕಾರದ ಕ್ರಮವೇನು?*

ಶ್ರೀ ಕೆ.ಜೆ ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) ಬಸವ ಕಲ್ಯಾಣ ಯಾತಾಸ್ಥಳಗಳ ವ್ಯಾಪ್ತಿಯಲ್ಲಿ ಒಟ್ಟು 12 ರಸ್ತೆಗಳು ಇರುತ್ತದೆ.

1. ಕೋಟಿ ರಸ್ತೆ
2. ಗಡಗಿ ಮಠ (ಪ್ರಭುದೇವರ) ರಸ್ತೆ
3. ಆರವಿನ ಮನೆ ರಸ್ತೆ
4. ಅಕ್ಕನಾಗಮ್ಮನಗವಿ ರಸ್ತೆ
5. ಮಡಿವಾಳ ಮಾಜಿ ದೇವರ ಹೊಂಡದ ರಸ್ತೆ
6. ಅನುಭವ ಮಂಟಪ ರಸ್ತೆ
7. ಸೂಲಿ ಚಂದಯ್ಯ ರಸ್ತೆ
8. ವಿಷ್ರಾಂತ ಶೇಕರ ರಸ್ತೆ
9. ರಾಜಾ ಬಗಸ್ವಾರ ದರ್ಗಾ ರಸ್ತೆ
10. ಮೌಲಾನಾ ಯಾಕೂಬ ದರ್ಗಾ ರಸ್ತೆ
11. ಶ್ರೀ ಬಸವೇಷ್ವರ ಮಂದಿರ್ತೆ
12. ಪಾರಸಕಟಾಸ್ತೆ.

ಆ) ಹೌದು.

ಇ) ಕಳೆದ ವರ್ಷ 1990-91 ನೇ ಸಾಲಿನಲ್ಲಿ ರೂ. 2.69 ಲಕ್ಷ ಬಿಡುಗಡೆ ಮಾಡಿದೆ ಮತ್ತು ರೂ. 4.45 ಲಕ್ಷಗಳನ್ನು 91-92ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗುವುದು.

**ಆಳಂದ ತಾಲ್ಲೂಕಿನ ಸಲಗರ ಗ್ರಾಮಕ್ಕೆ ಪೋಲೀಸ್ ಠಾಣೆ ಸ್ಥಾಪನೆ.**

3222 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಆಳಂದ ತಾಲ್ಲೂಕಿನ ಸಲಗರ ಗ್ರಾಮದಲ್ಲಿ ಇಲ್ಲಿಯವರೆಗೆ ನಡೆದಿರುವ ಕಳ್ಳತನ, ಗಲಾಟೆಗಳ ಸಂಖ್ಯೆಗಳೆಷ್ಟು?*

ಅ) ಸದರಿ ಜಾಗಕ್ಕೆ ನೂತನ ಪೊಲೀಸ್ ಠಾಣೆ ತೆರೆಯಲು ಸರ್ಕಾರಕ್ಕೆ ಸಾಕಷ್ಟು ಸಲ ಮನವಿ ಮಾಡಿದ್ದಾಗ್ಯೂ ಕೂಡ ಕ್ರಮ ಕೈಗೊಳ್ಳದಿರಲು ಕಾರಣಗಳೇನು?

ಇ) ಸಾರ್ವಜನಿಕ ಹಿತದೃಷ್ಟಿಯಿಂದ ಇನ್ನೆಷ್ಟು ದಿವಸಗಳಲ್ಲಿ ಪೊಲೀಸ್ ಠಾಣೆ ತೆರೆಯಲಾಗುವುದು? ಈ ಬಗ್ಗೆ ಇಲ್ಲಿಯವರೆಗೆ ತೆಗೆದುಕೊಂಡ ಕ್ರಮಗಳೇನು?

ಅ) ಅಳಂದ ತಾಲ್ಲೂಕಿನ ವಿ.ಕೆ. ಸಲಗರ ಗ್ರಾಮದಲ್ಲಿ ಮರದಿಯಾಗಿರುವ ಕಳ್ಳತನ ಹಾಗೂ ಗಲಾಟೆಗಳ ಸಂಖ್ಯೆ ಈ ಕೆಳಕಂಡಂತಿದೆ.

| | 1989 | 1990 | 1991 |
|---|---|---|---|
| ಕಳ್ಳತನ | 1 | - | 1 |
| ಗಲಾಟೆಗಳು, ದೊಂಬಿ | 1 | 1 | 1 |

ಆ) ವಿ.ಕೆ. ಸಲಗರ ಗ್ರಾಮದಲ್ಲಿ ಹೊಸ ಪೊಲೀಸ್ ಠಾಣೆಯೊಂದನ್ನು ತೆರೆಯುವ ಬಗ್ಗೆ ಯಾವ ಪ್ರಸ್ತಾಪವು ಇರುವುದಿಲ್ಲ. ಈ ಪ್ರದೇಶದ ಅಪರಾಧ ಹಾಗೂ ಕಾನೂನು ಮತ್ತು ಸುವ್ಯವಸ್ಥೆಗಳ ಪರಿಸ್ಥಿತಿಗಳಿಂದಲೂ ಸಹ ಇದು ಅವಶ್ಯಕವೆಂದು ಕಂಡು ಬಂದಿರುವುದಿಲ್ಲ.

ಇ) ಮೇಲಿನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

**ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ತೊಂದರೆ.**

3215 - ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 15-8-91ರಂದು ಬೆಂಗಳೂರು ಮಹಾನಗರದ ಜನಸಂಖ್ಯೆ ಎಷ್ಟು?

ಆ) ನಗರದ ಜನಸಂಖ್ಯೆಗೆ ಬೇಕಾಗುವ ಕುಡಿಯುವ ನೀರಿನ ಪ್ರಮಾಣವೆಷ್ಟು?

ಇ) ನಗರದ ಜನತೆಗೆ 2001ನೇ ಇಸವಿಗೆ ಬೇಕಾಗುವಷ್ಟು ನೀರನ್ನು ಒದಗಿಸಲು ಸರ್ಕಾರ ಹಾಕಿಕೊಂಡಿರುವ ಯೋಜನೆಯ ವಿವರಗಳೇನು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)

ಅ) 1991ನೇ ಇಸವಿಯಲ್ಲಿ ನಡೆದ ಜನಗಣತಿ ಪ್ರಕಾರ ಬೆಂಗಳೂರು ನಗರದಲ್ಲಿ ಒಟ್ಟು ಜನಸಂಖ್ಯೆ ಸುಮಾರು 42 ಲಕ್ಷ.

ಆ) 630 ದಶ ಲಕ್ಷ ಲೀಟರ್.

ಇ) ಕಾವೇರಿ ನೀರು ಸರಬರಾಜು ಯೋಜನೆ 3ನೇ ಹಂತವನ್ನು 1992ನೇ ಜೂನ್ ಅಂತ್ಯದೊಳಗೆ ಪೂರ್ಣಗೊಳ್ಳಲಿದೆ ಇದಾದ ನಂತರ ಕಾವೇರಿ ನೀರು ಸರಬರಾಜು 4ನೇ ಹಂತವನ್ನು 1000 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಇದನ್ನು 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

**ಬೆಂಗಳೂರು ನಗರದಲ್ಲಿ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯ ಖಾಲಿಮನೆಗಳ ಸಂಖ್ಯೆ.**

3319 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಕರ್ನಾಟಕ ಗೃಹನಿರ್ಮಾಣ ಮಂಡಳಿ ನಿರ್ಮಿತ ಮನೆಗಳಲ್ಲಿ ಖಾಲಿಯಿರುವ ಮನೆಗಳ ಸಂಖ್ಯೆಯೆಷ್ಟು?